ದಿನಾಂಕಃ 25-01-2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ- ಪ್ರತಿವಾದಿ 2 ರಿಂದ 17 ರ ಪರ ಶ್ರೀ ಕೆಎಸ್‌ಪಿ ವಕೀಲರಿಂದ

ನಾನು ಖಾಯಂ ಆಗಿ ಹುರಳಿಕುಪ್ಪಿ ಗ್ರಾಮದಲ್ಲಿ ವಾಸವಾಗಿರುತ್ತೇವೆ ಅಂದರೆ ಸರಿಯಲ್ಲ. ನಾನು ರಿಲೈನ್ಸ ಕಂಪನಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ನವಲಗುಂದದಲ್ಲಿ ವಾಸವಾಗಿರುವೆನು. ಈ ದಾವೆ ದಾಖಲು ಮಾಡುವ ಸಮಯದಲ್ಲಿ ಹುರಳಿಕುಪ್ಪಿ ಗ್ರಾಮದಲ್ಲಿ ನಾನು, ನನ್ನ ತಾಯಿ, ತಂಗಿ, 1 ನೇ ಪ್ರತಿವಾದಿ ಕೂಡಿಯೇ ವಾಸವಾಗಿದ್ದೇವು ಅಂದರೆ ಸರಿ. ಈ ದಾವೆಯನ್ನು ದಾಖಲು ಮಾಡಲು ವಕೀಲರಿಗೆ ನಾನೇ ಮಾಹಿತಿ ನೀಡಿರುವೆನು. ಈ ದಾವೆ ದಾಖಲು ಮಾಡುವ ಸಮಯದಲ್ಲಿ ಪ್ರತಿವಾದಿ 4 ಮತ್ತು 7 ರವರು ಮೃತಪಟ್ಟಿರುವ ಬಗ್ಗೆ ನನಗೆ ಮಾಹಿತಿ ಇತ್ತು ಅಂದರೆ ಸರಿಯಲ್ಲ. ಈ ದಾವೆಯನ್ನು ದಾವಾ ಆಸ್ತಿಗೆ ಸಂಬಂಧಪಟ್ಟಂತಹ ಪಂಚಾಯತಿಯ ದಾಖಲಾತಿಗಳ ಆಧಾರದ ಮೇರೆಗೆ ಮಾಡಿರುವೆನು ಅಂದರೆ ಸರಿ. ದಾವಾ ಆಸ್ತಿ ರಿ.ಸ ನಂ. 164 ಜಮೀನು ಕ್ಷೇತ್ರ 5 ಎಕರೆ 17 ಗುಂಟೆ ಇದು ನನ್ನ ತಂದೆಯ ಹಾಗೂ ಗುರುರಾವ ಹನುಮಂತರಾವ ಕುಲಕರಣಿ ದತ್ತಾತ್ರೇಯ ಹನುಮಂತರಾವ ಕುಲಕರಣಿ ಇವರ ಸಾಮೂಹಿಕ ಆಸ್ತಿ ಅಂದರೆ ಸರಿ. ಈ ಆಸ್ತಿಯನ್ನು ಈ 3 ಜನರು ಕೂಡಿಕೊಂಡು ಬಿನ್‌ಶೇತ್ಕಿ ಜಮೀನನ್ನಾಗಿ ಪರಿವತಿಸಿರುವರು ಅಂದರೆ ಸರಿ. ಸದರಿ ಜಮೀನಿನಲ್ಲಿ ಒಟ್ಟು 44 ನಿವೇಶನಗಳು ಆಗಿರುವವು ಅಂದರೆ ಸರಿ. ಈ ನಿವೇಶನಗಳನ್ನು ಈ 3 ಜನರು ಕೂಡಿಕೊಂಡು ಮಾರಾಟ ಮಾಡಿರುವರು ಅಂದರೆ ಸಾಕ್ಷಿಯು ತನಗೆ ಗೊತ್ತಿರುವುದಿಲ್ಲವೆಂದು ಉತ್ತರಿಸುವರು. ಪ್ಲಾಟ ನಂ.22 ರಿಂದ 44 ರ ಪ್ಲಾಟಗಳನ್ನು ಸಹ ಈ 3 ಜನರು ಕೂಡಿಕೊಂಡು ಮಾರಾಟ ಮಾಡಿರುವರು ಅಂದರೆ ಸಾಕ್ಷಿಯು ತನಗೆ ಗೊತ್ತಿರುವುದಿಲ್ಲವೆಂದು ಉತ್ತರಿಸುವರು. ನಿಪಿ 50 ರಿಂದ 57 ದಾಖಲೆಗಳ ಪ್ರಕಾರ ನಿವೇಶನಗಳನ್ನು ಮಾರಾಟ ಮಾಡಿರುವ ಬಗ್ಗೆ ಉಪನೊಂದಣಿ ಕಚೇರಿಯಿಂದ ದಾಖಲಾತಿಗಳನ್ನು ನಾನು ಪಡೆದುಕೊಂಡಿರುವೆನು. ಆ ಖರೀದಿ ಪತ್ರಗಳ ಧೃಡೀಕರಣ

ಪತ್ರಗಳನ್ನು ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿರುವೆನು. ಈ ದಾಖಲಾತಿಗಳನ್ನು ಹಾಜರುಪಡಿಸದೇ ಇದ್ದರೂ ಸಹ ಹಾಜರುಪಡಿಸಿದ್ದೆನೆ ಅಂತಾ ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ಪ್ಲಾಟ ನಂ. 22 ರಿಂದ 44 ನಿವೇಶನಗಳನ್ನು ಯಾರು ಖರೀದಿ ಹಿಡಿದಿರುವರು ಎಂಬುದರ ಬಗ್ಗೆ ನನಗೆ ನೆನಪಿಲ್ಲ. ಈ ಪ್ಲಾಟಗಳನ್ನು ಖರೀದಿ ಹಿಡಿದಿರುವ ಖರೀದಿದಾರರ ಆಸ್ತಿಯ ವಿಪಿಸಿ ನಂಬರ ಸಹ ನನಗೆ ನಿರದಿಷ್ಟವಾಗಿ ಹೇಳಲು ಆಗುವುದಿಲ್ಲ. ಈ ದಾವೆಯಲ್ಲಿ ದತ್ತಾತ್ರೇಯ ಕುಲಕರಣಿ, ಗುರುರಾವ ಕುಲಕರಣಿ ಇವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಅಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲಾತಿಗಳ ಪ್ರಕಾರ ನಿವೇಶನ ಸಂಖ್ಯೆ 29 ನ್ನು ಬಸವಂತಪ್ಪ ಶಿವಪ್ಪ ತಿಪ್ಪಕ್ಕನವರ ಹಾಗೂ ಆತನ ಹೆಂಡತಿ ತಿಪ್ಪವ್ವ ಕೂಡಿಕೊಂಡು ನಿಪಿ 55 ರ ಪ್ರಕಾರ ಖರೀದಿ ಮಾಡಿರುವರು ಅಂದರೆ ಸರಿ. ಈ ದಾವೆಯಲ್ಲಿ ತಿಪ್ಪವ್ವ ಬಸವಂತಪ್ಪ ತಿಪ್ಪಕ್ಕನವರ ಇವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಅಂದರೆ ಸರಿ. ನಿಪಿ 56 ರ ದಾಖಲೆ ಪ್ರಕಾರ ಪ್ಲಾಟ ನಂ. 28 ನ್ನು ಶಂಕ್ರವ್ವ ಪಕ್ಕಿರಪ್ಪ ಹೊನ್ನಿಕೊಪ್ಪ ಇವರು ಖರೀದಿ ಮಾಡಿದ್ದು ಅವರನ್ನು ಸಹ ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಅಂದರೆ ಸರಿ. ನಿಪಿ 57 ರ ಪ್ಲಾಟ ಸಂ. 39 ಹಾಗೂ 42 ನ್ನು ವೀರಪ್ಪ ಶಿವಬಸಪ್ಪ ಹೊಸಳ್ಳಿ ಎಂಬುವರು ಖರೀದಿ ಮಾಡಿದ್ದು ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಅಂದರೆ ಸರಿ. ದಾವಾ ಆಸ್ತಿ ರಿ.ಸ ನಂ. 164 ರ ಸಂಪೂರ್ಣ ಚಕ್ಕಬಂದಿ ನನಗೆ ಹೇಳಲು ಆಗುವುದಿಲ್ಲ. ವಾದಪತ್ರದಲ್ಲಿ ಹೇಳಿರತಕ್ಕಂತಹ ಪ್ಲಾಟ ನಂ. 22 ರಿಂದ 44 ರ ಚಕ್ಕಬಂದಿಯು ಸಹ ನನಗೆ ಹೇಳಲು ಆಗುವುದಿಲ್ಲ.

ದಾವಾ ಆಸ್ತಿಯನ್ನು ಹೊರತುಪಡಿಸಿ ಹುರಳಿಕುಪ್ಪಿ ಗ್ರಾಮದಲ್ಲಿ ವಿಪಿಸಿ ನಂ.274 ರ ಆಸ್ತಿ ಇರುವುದು ಅಂದರೆ ಸರಿ. ಈ ಆಸ್ತಿಯನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ ಅಂದರೆ ಸರಿ. ಪ್ಲಾಟ ನಂ. 34 ಹಾಗೂ 35 ಇವುಗಳನ್ನು ನಮ್ಮ ತಂದೆ ಹಾಗೂ ದತ್ತಾತ್ರೇಯ ಕೂಡಿಕೊಡು ನಾಗವ್ವ ಮಲ್ಲಪ್ಪ ಹೊಸಳ್ಳಿ ಹಾಗೂ ಮಲ್ಲಪ್ಪ ಪಕ್ಕಿರಪ್ಪ ಹೊಸಳ್ಳಿ ಇವರಿಗೆ ಮಾರಾಟ ಮಾಡಿರುವರು ಅಂದರೆ ಸಾಕ್ಷಿಯು ತನಗೆ

ಗೊತ್ತಿರುವುದಿಲ್ಲವೆಂದು ಉತ್ತರಿಸುವರು. ಇವರು ಈ ನಿವೇಶಗಳನ್ನು ಪ್ರತಿವಾದಿ 11 ಮತ್ತು 12 ರವರಿಗೆ ಮಾರಾಟ ಮಾಡಿರುವರು ಅಂದರೆ ಸಾಕ್ಷಿಯು ತನಗೆ ನಿರದಿಷ್ಟವಾಗಿ ಗೊತ್ತಿರುವುದಿಲ್ಲವೆಂದು ಉತ್ತರಿಸುವರು. ಪ್ಲಾಟ ನಂ. 34 ಹಾಗೂ 35 ಮೂಲ ಖರೀದಿದಾರರನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಅಂದರೆ ಸರಿ. ದಾವಾ ಪ್ಲಾಟ ನಂ. 42 ನ್ನು ನಿಪಿ 54 ಮತ್ತು 57 ರ ದಾಖಲೆ ಪ್ರಕಾರ ಸೋಮಶೇಖರ ಬಸಪ್ಪ ಹೊಸಳ್ಳಿ ಹಾಗೂ ಈರಪ್ಪ ಶಿವಬಸಪ್ಪ ಹೊಸಳ್ಳಿ ಇವರಿಗೆ ಮಾರಾಟ ಮಾಡಿದ್ದು ನಿದಿರ್ಷ್ಟವಾಗಿ ಈ ಪ್ಲಾಟನ್ನು ಯಾರಿಗೆ ಮಾರಾಟ ಮಾಡಿರುವರು ಎಂಬುದರ ಬಗ್ಗೆ ನನಗೆ ಹೇಳಲು ಆಗುವುದಿಲ್ಲ.

ರಿ ಸ ನಂ. 164 ಆಸ್ತಿಯು ಪಿತ್ರಾರ್ಜಿತ ಆಸ್ತಿ ಆಗಿದ್ದು ಅದರಲ್ಲಿನ 3 ಎಕರೆ 13 ಗುಂಟೆಯು ನನ್ನ ತಂದೆಗೆ ವಿಭಾಗದ ಮೂಲಕ ಬಂದಿರುವುದು. ಈ ವಿಭಾಗ ಆದ ಬಗ್ಗೆ ದಾಖಲಾತಿಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುವೆನು. ಈ ದಾವೆಯಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತಹ ನಿಪಿ 1 ರ ಕೈಬರಹದ ಉತಾರವನ್ನು ಹೊರತುಪಡಿಸಿ ಯಾವುದೇ ದಾಖಲಾತಿಗಳನ್ನು ನಾನು ಹಾಜರುಪಡಿಸಿರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿ 2 ರಿಂದ 17 ರವರು ದಾವಾ ನಿವೇಶನಗಳನ್ನು ಖರೀದಿ ಮಾಡಿರುವ ಬಗ್ಗೆ ನನಗೆ 2012-13 ರಲ್ಲಿ ಗೊತ್ತಾಗಿರುವುದು. ಪ್ಲಾಟ ನಂ. 22 ರಿಂದ 44 ಗಳನ್ನು 2009 ರಿಂದ 2010 ರವರೆಗೆ ಖರೀದಿ ಮಾಡಿ ಕಬ್ಜೆಯನ್ನು ಹೊಂದಿರುವರು ಅಂದರೆ ಸಾಕ್ಷಿಯು ತನಗೆ ಈ ಿ ಸಂಗತಿ ಬಗ್ಗೆ ಗೊತ್ತಿರುವುದಿಲ್ಲವೆಂದು ಉತ್ತರಿಸುವರು. ಈ ನಿವೇಶನಗಳನ್ನು ಖರೀದಿ ಹಿಡಿದಿರುವ ಮಾಲೀಕರು ಮನೆ ಕಟ್ಟಿಕೊಂಡು ವಾಸವಾಗಿರುವರು ಅಂದರೆ ಕೆಲವೊಂದು ಮನೆಗಳು ಖುಲ್ಲಾ ಇರುವವು ಎಂದು ಸಾಕ್ಷಿ ಉತ್ತರಿಸುವರು. ಈ ನಿವೇಶಗಳನಲ್ಲಿ ನಿರದಿಷ್ಟವಾಗಿ ಯಾವ ನಿವೇಶನದಲ್ಲಿ ಮನೆ ಕಟ್ಟಿಕೊಂಡಿರುವರು ಮತ್ತು ಯಾವ ನಿವೇಶನ ಖುಲ್ಲಾ ಇರುವುದು ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಈ ಖರೀದಿ ಮಾಡಿರತಕ್ಕಂತಹ ನಿವೇಶನಲ್ಲಿ ಆ ನಿವೇಶನಗಳ ಮಾಲೀಕರಿಗೆ ಸರಕಾರದಿಂದ ಬಸವ ವಸತಿ

ಯೋಜನೆ ಮತ್ತು ಅಂಬೇಡ್ಕರ ವಸತಿ ಯೋಜನೆಯಡಿಯಲ್ಲಿ ಸರಕಾರದಿಂದ ಹಣ ಮಂಜೂರು ಆಗಿರುವುದು ಅಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಪ್ಲಾಟ ನಂ. 22 ರಿಂದ 24 ಗಳನ್ನು ನನ್ನ ತಂದೆ ಹಾಗೂ ಆತನ ಚಿಕ್ಕಪಂದಿರಾದ ಗುರುರಾವ, ದತ್ತಾತ್ರರಾವ ಇವರು ಕೂಡಿಕೊಂಡು ಮಾರಾಟ ಮಾಡಿರುವರು ಅಂದರೆ ಸಾಕ್ಷಿ ಯು ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಈ ದಾವೆ ದಾಖಲು ಮಾಡಿದ ನಂತರ ದಾವಾ ಆಸ್ತಿಗೆ ಸಂಬಂಧಪಟ್ಟಂತ ದಾಖಲಾತಿಗಳು ಯಾರ ಹೆಸರಿನಲ್ಲಿ ಇರುವುದು ಎಂಬುದರ ಬಗ್ಗೆ ನಾನು ನೋಡಲು ಪ್ರಯತ್ನಪಟ್ಟಿರುವೆನು. ನನ್ನ ತಂದೆ ಮತ್ತು ಆತನ ಚಿಕ್ಕಪ್ಪಂದಿರು ಕೂಡಿಕೊಂಡು ದಾವಾ ಪ್ಲಾಟಗಳನ್ನು ಮನತೆನದ ಅಡಚಣೆ ಸಲುವಾಗಿ ಮಾರಾಟ ಮಾಡಿರುವರು ಅಂದರೆ ಸರಿಯಲ್ಲ. ಈ ದಾವಾ ಪ್ಲಾಟಗಳನ್ನು ಖರೀದಿ ಮಾಡುವ ಸಮಯದಲ್ಲಿ ಪ್ರತಿವಾದಿ 2 ರಿಂದ 17 ರವರು ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ಅವು ಸರಿಯಾಗಿ ಇರುವುದರಿಂದ ಖಾತ್ರಿಪಡಿಸಿಕೊಂಡು ಅವುಗಳನ್ನು ಖರೀದಿ ಮಾಡಿರುವರು ಅಂದರೆ ಸರಿಯಲ್ಲ. ಪ್ರತಿವಾದಿ 2 ರಿಂದ 17 ರವರು ಈ ನಿವೇಶನಗಳನ್ನು ಖರೀದಿ ಮಾಡುವ ಸಮಯದಲ್ಲಿ ನನ್ನ ತಂದೆಗೆ ಮೋಸ ಮಾಡಿರುವರು. ಈ ಮಾರಾಟ ಮಾಡುವ ಸಮಯದಲ್ಲಿ ನನ್ನ ತಂದೆಗೆ ಆತನ ಚಿಕ್ಕಪ್ಪಂದಿರು ಸಹ ಮೋಸ ಮಾಡಿರುವರೇ ಎಂಬ ಪ್ರಶ್ನೆಗೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲವೆಂದು ಉತತರಿಸುವರು. ಪ್ರತಿವಾದಿ 2 ರಿಂದ 17 ರವರು ದಾವಾ ಪ್ಲಾಟಗಳನ್ನು ಖರೀದಿ ಮಾಡಿದ ದಿನದಿಂದ ಇವತ್ತಿನವರೆಗೂ ಅವರ ಕಬ್ಜೆಯಲ್ಲಿ ಇರುವವು ಅಂದರೆ ಸರಿ. ಈ ದಾವೆ ಪ್ಲಾಟಗಳಲ್ಲಿ ಪ್ರತಿವಾದಿಯರು ಮನೆ ಕಟ್ಟಿಕೊಳ್ಳುವ ಸಮಯದಲ್ಲಿ ಪಂಚಾಯತಿಯಿಂದ ಪರವಾನಿಗೆ ಪಡೆದುಕೊಳ್ಳುವ ಸಮಯದಲ್ಲಿ ಕಟ್ಟಡ ಪರವಾನಿಗೆಯನ್ನು ಪಡೆದುಕೊಳ್ಳುವ ಸಮಯದಲ್ಲಿ ನಾವು ಪಂಚಾಯತಿಯಲ್ಲಿ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ.

ಪ್ರತಿವಾದಿ 2 ರವರು ಪ್ಲಾಟ ನಂ. 22 ಮತ್ತು 23 ನ್ನು ದಿಃ 13.06.2008 ರಂದು ನನ್ನ ತಂದೆ ಹಾಗೂ ಆತನ ಚಿಕ್ಕಪಂದಿರ ಕಡೆಯಿಂದ ನೊಂದಾಯಿತ ಖರೀದಿ ಪತ್ರದ ಮೂಲಕ

ಖರೀದಿ ಮಾಡಿರುವವರು ಅಂದರ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಈ ಖರೀದಿ ಪತ್ರದ ಆಧಾರದ ಮೇರೆಗೆ ಪಂಚಾಯತಿಯವರು 1099 ಹಾಗೂ 1100 ಅಂತಾ ಪಂಚಾಯತಿಯ ನಂಬರನ್ನು ಪ್ಲಾಟ ನಂ. 23 ಹಾಗೂ 24 ಕ್ಕೆ ನೀಡಿರುವವರು ಅಂದರೆ ಸರಿ. ಈ ಆಸ್ತಿಗಳಿಗೆ ಪ್ರತಿವಾದಿ 2 ರವರ ಹೆಸರನ್ನು ದಾಖಲು ಮಾಡುವ ಪೂರ್ವದಲ್ಲಿ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಠರಾವು ಪಾಸು ಮಾಡಿ ಪಂಚಾಯತಿ ನಂಬರನ್ನು ನೀಡಿ ಹೆಸರನ್ನು ದಾಖಲು ಮಾಡಿರುವವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಪ್ರತಿವಾದಿ 3 ರವರು ಪ್ಲಾಟ ನಂ. 24, 25 ನ್ನು ನನ್ನ ತಂದೆ ಹಾಗೂ ಆತನ ಚಿಕ್ಕಪಂದಿರ ಕಡೆಯಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ದಿಃ 05.09.2007 ರಂದು ಖರೀದಿ ಮಾಡಿರುವವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ಸರಿಸುವರು. ಈ ಖರೀದಿ ಪತ್ರದ ಆಧಾರದ ಮೇರೆಗೆ ಪಂಚಾಯತಿಯವರು 1101 ಹಾಗೂ 1102 ಅಂತಾ ಪಂಚಾಯತಿಯ ನಂಬರನ್ನು ಪ್ಲಾಟ ನಂ. 25 ಹಾಗೂ 26 ಕ್ಕೆ ನೀಡಿರುವವರು ಅಂದರೆ ಸರಿ. ಈ ಆಸ್ತಿಗಳಿಗೆ ಪ್ರತಿವಾದಿ 3 ರವರ ಹೆಸರನ್ನು ದಾಖಲು ಮಾಡುವ ಪೂರ್ವದಲ್ಲಿ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಠರಾವು ಪಾಸು ಮಾಡಿ ಪಂಚಾಯತಿ ನಂಬರನ್ನು ನೀಡಿ ಹೆಸರನ್ನು ದಾಖಲು ಮಾಡಿರುವವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಪ್ರತಿವಾದಿ 4 ರವರು ಪ್ಲಾಟ ನಂ. 26 ಮತ್ತು 27 ನ್ನು ನನ್ನ ತಂದೆ ಹಾಗೂ ಆತನ ಚಿಕ್ಕಪಂದಿರ ಕಡೆಯಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ದಿಃ18.04..2007 ರಂದು ಖರೀದಿ ಮಾಡಿರುವವರು ಅಂದರೆ ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ಸರಿಸುವರು. ಈ ಖರೀದಿ ಪತ್ರದ ಆಧಾರದ ಮೇರೆಗೆ ಪಂಚಾಯತಿಯವರು 1103 ಹಾಗೂ 1104 ಅಂತಾ ಪಂಚಾಯತಿಯ ನಂಬರನ್ನು ಪ್ಲಾಟ ನಂ. 26 ಹಾಗೂ 27 ಕ್ಕೆ ನೀಡಿರುವವರು ಅಂದರೆ ಸರಿ. ಈ ಆಸ್ತಿಗಳಿಗೆ ಪ್ರತಿವಾದಿ 4 ರವರ ಹೆಸರನ್ನು ದಾಖಲು ಮಾಡುವ ಪೂರ್ವದಲ್ಲಿ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಠರಾವು ಪಾಸು ಮಾಡಿ

ಪಂಚಾಯತಿ ನಂಬರನ್ನು ನೀಡಿ ಹೆಸರನ್ನು ದಾಖಲು ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ಸರಿಸುವರು. ಪ್ರತಿವಾದಿ 5 ರವರು ಪ್ಲಾಟ ನಂ. 28 ನ್ನು ನನ್ನ ತಂದೆ ಹಾಗೂ ಆತನ ಚಿಕ್ಕಪಂದಿರ ಕಡೆಯಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ದಿಃ 10.08.2007 ರಂದು ಖರೀದಿ ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಈ ಖರೀದಿ ಪತ್ರದ ಆಧಾರದ ಮೇರೆಗೆ ಪಂಚಾಯತಿಯವರು 1105 ಅಂತಾ ಪಂಚಾಯತಿಯ ನಂಬರನ್ನು ಪ್ಲಾಟ ನಂ. 28 ಕ್ಕೆ ನೀಡಿರುವರು ಅಂದರೆ ಸರಿ. ಈ ಆಸ್ತಿಗಳಿಗೆ ಪ್ರತಿವಾದಿ 5 ರವರ ಹೆಸರನ್ನು ದಾಖಲು ಮಾಡುವ ಪೂರ್ವದಲ್ಲಿ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಠರಾವು ಪಾಸು ಮಾಡಿ ಪಂಚಾಯತಿ ನಂಬರನ್ನು ನೀಡಿ ಹೆಸರನ್ನು ದಾಖಲು ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ಸರಿಸುವರು. ಪ್ರತಿವಾದಿ 6 ರವರು ಪ್ಲಾಟ ನಂ. 29 ನ್ನು ನನ್ನ ತಂದೆ ಹಾಗೂ ಆತನ ಚಿಕ್ಕಪಂದಿರ ಕಡೆಯಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ದಿಃ 19.04.2007 ರಂದು ಖರೀದಿ ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಈ ಖರೀದಿ ಪತ್ರದ ಆಧಾರದ ಮೇರೆಗೆ ಪಂಚಾಯತಿಯವರು 1106 ಅಂತಾ ಪಂಚಾಯತಿಯ ನಂಬರನ್ನು ಪ್ಲಾಟ ನಂ. 29 ಕ್ಕೆ ನೀಡಿರುವರು ಅಂದರೆ ಸರಿ. ಈ ಆಸ್ತಿಗಳಿಗೆ ಪ್ರತಿವಾದಿ 6 ರವರ ಹೆಸರನ್ನು ದಾಖಲು ಮಾಡುವ ಪೂರ್ವದಲ್ಲಿ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಠರಾವು ಪಾಸು ಮಾಡಿ ಪಂಚಾಯತಿ ನಂಬರನ್ನು ನೀಡಿ ಹೆಸರನ್ನು ದಾಖಲು ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ಸರಿಸುವರು. ಪ್ರತಿವಾದಿ 7 ರವರು ಪ್ಲಾಟ ನಂ. 30 ನ್ನು ನನ್ನ ತಂದೆ ಹಾಗೂ ಆತನ ಚಿಕ್ಕಪಂದಿರ ಕಡೆಯಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ದಿಃ 27.09.2010 ರಂದು ಖರೀದಿ ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ಸರಿಸುವರು. ಈ ಖರೀದಿ ಪತ್ರದ ಆಧಾರದ ಮೇರೆಗೆ ಪಂಚಾಯತಿಯವರು 1107 ಅಂತಾ ಪಂಚಾಯತಿಯ ನಂಬರನ್ನು ಪ್ಲಾಟ ನಂ.30 ಕ್ಕೆ

ನೀಡಿರುವರು ಅಂದರೆ ಸರಿ. ಈ ಆಸ್ತಿಗಳಿಗೆ ಪ್ರತಿವಾದಿ 7 ರವರ ಹೆಸರನ್ನು ದಾಖಲು ಮಾಡುವ ಪೂರ್ವದಲ್ಲಿ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಠರಾವು ಪಾಸು ಮಾಡಿ ಪಂಚಾಯತಿ ನಂಬರನ್ನು ನೀಡಿ ಹೆಸರನ್ನು ದಾಖಲು ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು.

ಪ್ರತಿವಾದಿ 8 ರವರು ಪ್ಲಾಟ ನಂ. 31 ನ್ನು ನನ್ನ ತಂದೆ ಹಾಗೂ ಆತನ ಚಿಕ್ಕಪಂದಿರ ಕಡೆಯಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ದಿಃ 19.04.2007 ರಂದು ಖರೀದಿ ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಈ ಖರೀದಿ ಪತ್ರದ ಆಧಾರದ ಮೇರೆಗೆ ಪಂಚಾಯತಿಯವರು 1108 ಅಂತಾ ಪಂಚಾಯತಿಯ ನಂಬರನ್ನು ಪ್ಲಾಟ ನಂ.31 ಕ್ಕೆ ನೀಡಿರುವರು ಅಂದರೆ ಸರಿ. ಈ ಆಸ್ತಿಗಳಿಗೆ ಪ್ರತಿವಾದಿ 8 ರವರ ಹೆಸರನ್ನು ದಾಖಲು ಮಾಡುವ ಪೂರ್ವದಲ್ಲಿ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಠರಾವು ಪಾಸು ಮಾಡಿ ಪಂಚಾಯತಿ ನಂಬರನ್ನು ನೀಡಿ ಹೆಸರನ್ನು ದಾಖಲು ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಪ್ರತಿವಾದಿ 9 ರವರು ಪ್ಲಾಟ ನಂ. 32 ನ್ನು ನನ್ನ ತಂದೆ ಹಾಗೂ ಆತನ ಚಿಕ್ಕಪಂದಿರ ಕಡೆಯಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ದಿಃ 19.04.2007 ರಂದು ಖರೀದಿ ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಈ ಖರೀದಿ ಪತ್ರದ ಆಧಾರದ ಮೇರೆಗೆ ಪಂಚಾಯತಿಯವರು 1109 ಅಂತಾ ಪಂಚಾಯತಿಯ ನಂಬರನ್ನು ಪ್ಲಾಟ ನಂ.32 ಕ್ಕೆ ನೀಡಿರುವರು ಅಂದರೆ ಸರಿ. ಈ ಆಸ್ತಿಗಳಿಗೆ ಪ್ರತಿವಾದಿ 9 ರವರ ಹೆಸರನ್ನು ದಾಖಲು ಮಾಡುವ ಪೂರ್ವದಲ್ಲಿ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಠರಾವು ಪಾಸು ಮಾಡಿ ಪಂಚಾಯತಿ ನಂಬರನ್ನು ನೀಡಿ ಹೆಸರನ್ನು ದಾಖಲು ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು.

ಅಸಲು ದಾವಾ ನಂ. 55 /2017
ಪಿ ಡಬ್ಲು 1

ಪ್ರತಿವಾದಿ 10 ರವರು ಪ್ಲಾಟ ನಂ. 33 ನ್ನು ನನ್ನ ತಂದೆ ಹಾಗೂ ಆತನ ಚಿಕ್ಕಪಂದಿರ ಕಡೆಯಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ದಿಃ27.09.2010 ರಂದು ಖರೀದಿ ಮಾಡಿರುವರು ಅಂದರೆ ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ಸರಿಸುವರು. ಈ ಖರೀದಿ ಪತ್ರದ ಆಧಾರದ ಮೇರೆಗೆ ಪಂಚಾಯತಿಯವರು 1110 ಅಂತಾ ಪಂಚಾಯತಿಯ ನಂಬರನ್ನು ಪ್ಲಾಟ ನಂ.33 ಕ್ಕೆ ನೀಡಿರುವರು ಅಂದರೆ ಸರಿ. ಈ ಆಸ್ತಿಗಳಿಗೆ ಪ್ರತಿವಾದಿ 10 ರವರ ಹೆಸರನ್ನು ದಾಖಲು ಮಾಡುವ ಪುರ್ವದಲ್ಲಿ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಠರಾವು ಪಾಸು ಮಾಡಿ ಪಂಚಾಯತಿ ನಂಬರನ್ನು ನೀಡಿ ಹೆಸರನ್ನು ದಾಖಲು ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ಸರಿಸುವರು. ಪ್ರತಿವಾದಿ 11 ರವರು ಪ್ಲಾಟ ನಂ. 34 ನ್ನು ನನ್ನ ತಂದೆ ಹಾಗೂ ಆತನ ಚಿಕ್ಕಪಂದಿರ ಕಡೆಯಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ದಿಃ 15.02.2012 ರಂದು ಖರೀದಿ ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಈ ಖರೀದಿ ಪತ್ರದ ಆಧಾರದ ಮೇರೆಗೆ ಪಂಚಾಯತಿಯವರು 1111 ಅಂತಾ ಪಂಚಾಯತಿಯ ನಂಬರನ್ನು ಪ್ಲಾಟ ನಂ.34 ಕ್ಕೆ ನೀಡಿರುವರು ಅಂದರೆ ಸರಿ. ಈ ಆಸ್ತಿಗಳಿಗೆ ಪ್ರತಿವಾದಿ 11 ರವರ ಹೆಸರನ್ನು ದಾಖಲು ಮಾಡುವ ಪುರ್ವದಲ್ಲಿ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಠರಾವು ಪಾಸು ಮಾಡಿ ಪಂಚಾಯತಿ ನಂಬರನ್ನು ನೀಡಿ ಹೆಸರನ್ನು ದಾಖಲು ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ಸರಿಸುವರು. ಪ್ರತಿವಾದಿ 12 ರವರು ಪ್ಲಾಟ ನಂ. 35 ನ್ನು ನನ್ನ ತಂದೆ ಹಾಗೂ ಆತನ ಚಿಕ್ಕಪಂದಿರ ಕಡೆಯಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ದಿಃ 15.02.2012 ರಂದು ಖರೀದಿ ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ಸರಿಸುವರು. ಈ ಖರೀದಿ ಪತ್ರದ ಆಧಾರದ ಮೇರೆಗೆ ಪಂಚಾಯತಿಯವರು 1112 ಅಂತಾ ಪಂಚಾಯತಿಯ ನಂಬರನ್ನು ಪ್ಲಾಟ ನಂ.35 ಕ್ಕೆ ನೀಡಿರುವರು ಅಂದರೆ ಸರಿ. ಈ ಆಸ್ತಿಗಳಿಗೆ ಪ್ರತಿವಾದಿ 12 ರವರ ಹೆಸರನ್ನು ದಾಖಲು

ಮಾಡುವ ಪೂರ್ವದಲ್ಲಿ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಠರಾವು ಪಾಸು ಮಾಡಿ ಪಂಚಾಯತಿ ನಂಬರನ್ನು ನೀಡಿ ಹೆಸರನ್ನು ದಾಖಲು ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಪ್ರತಿವಾದಿ 13 ರವರು ಪ್ಲಾಟ ನಂ. 36 ನ್ನು ನನ್ನ ತಂದೆ ಹಾಗೂ ಆತನ ಚಿಕ್ಕಪಂದಿರ ಕಡೆಯಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ದಿಃ 30.05.2000 ರಂದು ಖರೀದಿ ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಈ ಖರೀದಿ ಪತ್ರದ ಆಧಾರದ ಮೇರೆಗೆ ಪಂಚಾಯತಿಯವರು 1113 ಅಂತಾ ಪಂಚಾಯತಿಯ ನಂಬರನ್ನು ಪ್ಲಾಟ ನಂ.36 ಕ್ಕೆ ನೀಡಿರುವರು ಅಂದರೆ ಸರಿ. ಈ ಆಸ್ತಿಗಳಿಗೆ ಪ್ರತಿವಾದಿ 13 ರವರ ಹೆಸರನ್ನು ದಾಖಲು ಮಾಡುವ ಪೂರ್ವದಲ್ಲಿ ಪಂಚಾಯತಿಯ ಸಾಮಾನ್ಯ ಸಭೆ ಠರಾವು ಪಾಸು ಮಾಡಿ ಪಂಚಾಯತಿ ನಂಬರನ್ನು ನೀಡಿ ಹೆಸರನ್ನು ದಾಖಲು ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಪ್ರತಿವಾದಿ 14 ರವರು ಪ್ಲಾಟ ನಂ. 36 ನ್ನು ನನ್ನ ತಂದೆ ಹಾಗೂ ಆತನ ಚಿಕ್ಕಪಂದಿರ ಕಡೆಯಿಂದ ನೊಂದಾಯಿತ ಖರೀದಿ ಪತ್ರ ದಿಃ 30.05.2000 ರಂದು ಖರೀದಿ ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಈ ಖರೀದಿ ಪತ್ರದ ಆಧಾರದ ಮೇರೆಗೆ ಪಂಚಾಯತಿಯವರು 1114 ಅಂತಾ ಪಂಚಾಯತಿಯ ನಂಬರನ್ನು ಪ್ಲಾಟ ನಂ.36 ಕ್ಕೆ ನೀಡಿರುವರು ಅಂದರೆ ಸರಿ. ಈ ಆಸ್ತಿಗಳಿಗೆ ಪ್ರತಿವಾದಿ 14 ರವರ ಹೆಸರನ್ನು ದಾಖಲು ಮಾಡುವ ಪೂರ್ವದಲ್ಲಿ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಠರಾವು ಪಾಸು ಮಾಡಿ ಪಂಚಾಯತಿ ನಂಬರನ್ನು ನೀಡಿ ಹೆಸರನ್ನು ದಾಖಲು ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಪ್ರತಿವಾದಿ 15 ರವರು ಪ್ಲಾಟ ನಂ. 38 ನ್ನು ನನ್ನ ತಂದೆ ಹಾಗೂ ಆತನ ಚಿಕ್ಕಪಂದಿರ ಕಡೆಯಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ದಿಃ 30.05.2000 ರಂದು ಖರೀದಿ ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಈ ಖರೀದಿ ಪತ್ರದ ಆಧಾರದ ಮೇರೆಗೆ

ಪಂಚಾಯತಿಯವರು 1115 ಅಂತಾ ಪಂಚಾಯತಿಯ ನಂಬರನ್ನು ಪ್ಲಾಟ ನಂ.38 ಕ್ಕೆ ನೀಡಿರುವರು ಅಂದರೆ ಸರಿ. ಈ ಆಸ್ತಿಗಳಿಗೆ ಪ್ರತಿವಾದಿ 15 ರವರ ಹೆಸರನ್ನು ದಾಖಲು ಮಾಡುವ ಪೂರ್ವದಲ್ಲಿ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಠರಾವು ಪಾಸು ಮಾಡಿ ಪಂಚಾಯತಿ ನಂಬರನ್ನು ನೀಡಿ ಹೆಸರನ್ನು ದಾಖಲು ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಪ್ರತಿವಾದಿ 16 ರವರು ಪ್ಲಾಟ ನಂ. 41 ಹಾಗೂ 42 ನ್ನು  ನನ್ನ ತಂದೆ ಹಾಗೂ ಆತನ ಚಿಕ್ಕಪಂದಿರ ಕಡೆಯಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ದಿಃ 19.04.2007  ರಂದು ಖರೀದಿ ಮಾಡಿರುವರು ಅಂದರೆ ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ಈ ಖರೀದಿ ಪತ್ರದ ಆಧಾರದ ಮೇರೆಗೆ ಪಂಚಾಯತಿಯವರು 1118 ಮತ್ತು 1119 ಅಂತಾ ಪಂಚಾಯತಿಯ ನಂಬರನ್ನು ಪ್ಲಾಟ ನಂ.41 ಹಾಗೂ 42 ಕ್ಕೆ ನೀಡಿರುವರು ಅಂದರೆ ಸರಿ. ಈ ಆಸ್ತಿಗಳಿಗೆ ಪ್ರತಿವಾದಿ 16 ರವರ ಹೆಸರನ್ನು ದಾಖಲು ಮಾಡುವ ಪೂರ್ವದಲ್ಲಿ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಠರಾವು ಪಾಸು ಮಾಡಿ ಪಂಚಾಯತಿ ನಂಬರನ್ನು ನೀಡಿ ಹೆಸರನ್ನು ದಾಖಲು ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ಸರಿಸುವರು. ಪ್ರತಿವಾದಿ 17 ರವರು ಪ್ಲಾಟ ನಂ. 44 ನ್ನು  ನನ್ನ ತಂದೆ ಹಾಗೂ ಆತನ ಚಿಕ್ಕಪಂದಿರ ಕಡೆಯಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ದಿಃ 28.09.2010 ರಂದು ಖರೀದಿ ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ಸರಿಸುವರು. ಈ ಖರೀದಿ ಪತ್ರದ ಆಧಾರದ ಮೇರೆಗೆ ಪಂಚಾಯತಿಯವರು 1121 ಅಂತಾ ಪಂಚಾಯತಿಯ ನಂಬರನ್ನು ಪ್ಲಾಟ ನಂ.44 ಕ್ಕೆ ನೀಡಿರುವರು ಅಂದರೆ ಸರಿ. ಈ ಆಸ್ತಿಗಳಿಗೆ ಪ್ರತಿವಾದಿ 17 ರವರ ಹೆಸರನ್ನು ದಾಖಲು ಮಾಡುವ ಪೂರ್ವದಲ್ಲಿ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಠರಾವು ಪಾಸು ಮಾಡಿ ಪಂಚಾಯತಿ ನಂಬರನ್ನು ನೀಡಿ ಹೆಸರನ್ನು ದಾಖಲು ಮಾಡಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ಸರಿಸುವರು.

ಅಸಲು ದಾವಾ ನಂ. 55 /2017
ಪಿ ಡಬ್ಲು 1

ನನ್ನ ತಂದೆ ಹಾಗೂ ಆತನ ಚಿಕ್ಕಪಂದಿರು ಪ್ರತಿವಾದಿ 2 ರಿಂದ 17 ರವರಿಗೆ ಮಾರಾಟ ಮಾಡಿರುವ ಬಗ್ಗೆ ನನಗೆ ತಿಳುವಳಿಕೆ ಬಂದಾಗಿಂದಲೂ ಮಾಹಿತಿ ಇದ್ದು ಆದರೂ ಸಹ ಪ್ರತಿವಾದಿಯರಿಗೆ ತೊಂದರೆ ನೀಡುವ ಸಲುವಾಗಿ ಈ ಸುಳ್ಳು ದಾವೆ ದಾಖಲು ಮಾಡಿದ್ದೆನೆ ಅಂದರೆ ಸರಿಯಲ್ಲ. ಪ್ರತಿವಾದಿ 2 ರಿಂದ 17 ರವರು ಖರೀದಿ ಹಿಡಿದಿರುವ ಪ್ಲಾಟಗಳಲ್ಲಿ ನನಗಾಗಲೀ, ಉಳಿದ ವಾದಿಯರಿಗಾಗಲೀ ಯಾವುದೇ ಹಿಸ್ಸೆ ಇರುವುದಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ
(ಸ್ಥಳ ಸವಣೂರ)